ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಅಪರ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.43/2018 DW-2

| | | |
|---|---|---|
| ಹೆಸರು | : | ಅಯುಬ್‌ಖಾನ್ |
| ತಂದೆಯ ಹೆಸರು | : | ಗುಲಾಮ್ ಅಹಮ್ಮದ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಗಂಗಾವತಿ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 11-11-2024

### ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ

ಆರೋಪಿತನು ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾನೆ. ಆರೋಪಿತನು ಆದಿ ನಾರಾಯಣ ಎನ್ನುವ ವ್ಯಕ್ತಿಯಿಂದ ರೂ.1 ಲಕ್ಷ ಸಾಲವನ್ನು ತನ್ನ ಮನೆಯ ಅಡಚಣೆಗಾಗಿ ಪಡೆದಿದ್ದ. ಸದರಿ ಸಾಲದ ಭದ್ರತೆಗಾಗಿ ಆರೋಪಿತನು ಆದಿನಾರಾಯಣ ಎನ್ನುವ ವ್ಯಕ್ತಿಗೆ 097803 ಮತ್ತು 097802 ಚೆಕ್‌ಗಳನ್ನು ಕೊಟ್ಟಿದ್ದನು. ಸದರಿ ಸಾಲವನ್ನು ಆರೋಪಿತನು ಪಡೆದ ನಂತರ ಅದನ್ನು 6 ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆ ಅಂತಾ ಆದಿನಾರಾಯಣನಿಗೆ ಹೇಳಿ ಸದರಿ ಹಣವನ್ನು ಆರೋಪಿತನು ಆದಿನಾರಾಯಣನಿಗೆ ಮರುಪಾವತಿ ಮಾಡಿರುತ್ತಾನೆ. ನಾನು ಮತ್ತು ಆರೋಪಿತನು ಸದರಿ ಹಣವನ್ನು ಮರುಪಾವತಿ ಮಾಡಿ 6 ತಿಂಗಳ ನಂತರ ಆದಿನಾರಾಯಣನನ್ನು ಭೇಟಿ ಮಾಡಿ ಆರೋಪಿತನು ನೀಡಿದಂತಹ ಚೆಕ್‌ಗಳನ್ನು ವಾಪಸ್ ಕೊಡುವಂತೆ ಕೇಳಿದ್ದೆವು. ಆಗ ಆದಿನಾರಾಯಣನು ಇವತ್ತು ಅಥವಾ ನಾಳೆ ಚೆಕ್‌ಗಳನ್ನು ಮರಳಿ ಕೊಡುತ್ತೇನೆ ಅಂತಾ ಹೇಳಿ ಕಾಲ ಮುಂದೂಡುತ್ತಾ ಬಂದಿರುತ್ತಾನೆ. ನಂತರದ ಅವಧಿಯಲ್ಲಿ ಚೆಕ್‌ಗಳನ್ನು ಕೇಳಲು ಹೋದಾಗ ಆದಿನಾರಾಯಣ ಧಮಕಿ ಹಾಕಿರುತ್ತಾನೆ. ಆದರೂ ಚೆಕ್‌ಗಳನ್ನು ಮರಳಿ ಕೊಡದೇ ಆದಿನಾರಾಯಣನು ಈ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾನೆ ಅಂತಾ ನನಗೆ ಗೊತ್ತಾಗಿರುತ್ತದೆ. ಆದ್ದರಿಂದ ಈ ಪ್ರಕರಣವನ್ನು ವಜಾ ಮಾಡಿ ಆರೋಪಿತನನ್ನು ದೋಲಷಮುಕ್ತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲುಃ ಪಿರ್ಯಾದಿದಾರರ ಪರ ವಕೀಲರಿಂದ</u>

ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಅವರ ಕೋರಿಕೆಯಂತೆ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಅಪರ ಜೆ.ಎಮ್.ಎಫ್.ಸಿ., ಸಿಂಧನೂರು.